ಅಸಲು ದಾವಾ ಸಂಖ್ಯೆ . 284/2013

ಡಿ.ಡಬ್ಲ್ಯೂ-2
ದಿಃ 15.03.2021
ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ವಾದಿ ಪರ ಶ್ರೀ ಜಿ ಎಸ್ ಕೆ ವಕೀಲರಿಂದ ಃ-

ದಿಃ 20.09.2017, 17.10.2017 , 04.12.2017 ರಲ್ಲಿ ತಹಶೀಲ್ದಾರ್ ರವರಿಗೆ 2 ನೇ ಪ್ರತಿವಾದಿ ಶೇಖರಪ್ಪ ರವರು ಸಲ್ಲಿಸಿರುವ ಅರ್ಜಿಯ ನಕಲನ್ನು ಸಾಕ್ಷಿಗೆ ತೋರಿಸಲಾಯಿತು. ಸದರಿ ಅರ್ಜಿಯನ್ನು ಸಾಕ್ಷಿ ನೋಡಿ ಹೌದು ಎಂದು ಗುರುತಿಸಿದ್ದು ಅದನ್ನು ನಿಪಿ 26 , 27, 28 ಎಂದು ಕ್ರಮವಾಗಿ ಗುರುತಿಸಲಾಯಿತು. ಸದರಿ ಅರ್ಜಿಗಳನ್ನು 2 ನೇ ಪ್ರತಿವಾದಿಯು ತಮ್ಮ ಮಕ್ಕಳ ಹಿಸ್ಸೆಗೆ ಖಾತೆ ಬದಲಾವಣೆ ಮಾಡಲು ಕೊಟ್ಟಿರುತ್ತಾರೆ ಎಂದು ಸೂಚಿಸಿದರೆ ನನಗೆ ಗೊತ್ತಿಲ್ಲ ಎಂದರು .

ಸದರಿ ಅರ್ಜಿಗಳು ನೀವು ಕರ್ತವ್ಯ ನಿರ್ವಹಿಸುತ್ತಿದ್ದಾಗ ಕೊಡಲಾಗಿರುತ್ತದೆ ಎಂದು ಸೂಚಿಸಿದರೆ ಸರಿಯಲ್ಲ. ಸಾಕ್ಷಿ ಸ್ವತಃ ನಾವು ಮೂರು ಜನ ಗುಮಾಸ್ತರಿದ್ದು , ಅರ್ಜಿ ಯಾರಿಗೆ ಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. 2017 ನೇ ಸಾಲಿನಲ್ಲಿ ನಾನು ಆರ್ ಆರ್ ಟಿ ವಿಭಾಗದ ಮೇಲ್ವಿಚಾರಕಿ ಆಗಿದ್ದೆ ಎಂದು ಸೂಚಿಸಿದರೆ ಸರಿಯಲ್ಲ. ನಾನು ಕೇವಲ ಗುಮಾಸ್ತರಾಗಿದ್ದೆ ಎಂದರು . ನೀವು ಆರ್ ಆರ್ ಟಿ ವಿಭಾಗದ ಮೇಲ್ವಿಚಾರಕಿ ಆಗಿದ್ದು ಎಲ್ಲಾ ಕಡತಗಳು ನನ್ನ ಸುಪತ್ತಿನಲ್ಲಿ ಇರುತ್ತಿತ್ತು ಎಂದರೆ ಸರಿಯಲ್ಲ. ಸದರಿ ಅರ್ಜಿ ಜೊತೆ 2 ನೇ ಪ್ರತಿವಾದಿಯು 21 ದಾಖಲೆಗಳನ್ನು ಸಲ್ಲಿಸಿರುತ್ತಾರೆ ಎಂದು ಸೂಚಿಸಿದರೆ ನನಗೆ ಗೊತ್ತಿಲ್ಲ. ಆರ್ ಎ (revenue inspector) ರವರು, ಗ್ರಾಮ ಲೆಕ್ಕಾಧಿಕಾರಿಗಳು (village accountant) ರವರುಗಳು ತಮ್ಮ ವರದಿಯಲ್ಲಿ ದಿಃ 18.04.1983 ರ ಜುಬಾನಿ ಹಿಸ್ಸೆಯಂತೆ ಅವರವರ ಹೆಸರಿಗೆ ಖಾತೆ ಬದಲಾವಣೆ ಆಗಬಹುದೆಂದು ತಹಶೀಲ್ದಾರ್ ರವರಿಗೆ ತಮ್ಮ ವರದಿಯನ್ನು ಸಲ್ಲಿಸಿರುತ್ತಾರೆಂದರೆ ನನಗೆ ಗೊತ್ತಿಲ್ಲ.

ಸದರಿ ವರದಿಯಲ್ಲಿ ನನ್ನ ಇಲಾಖೆಯಲ್ಲಿ ನನ್ನ ಮುಂದೆ ಬಂದಿತ್ತು ಎಂದರೆ ಸರಿಯಲ್ಲ. ಸದರಿ ದಾಖಲೆಯನ್ನು ನಾನು ಉದ್ದೇಶಪೂರ್ವಕವಾಗಿ ಸದರಿ ದಾಖಲೆಗಳನ್ನು ಮತ್ತು ವರದಿಯನ್ನು ಬಚ್ಚಿಟ್ಟು ಸದರಿ ದಾಖಲೆಗಳು ಲಭ್ಯವಿಲ್ಲ ಎಂದು ಹೇಳಿಕೆ ಕೊಟ್ಟಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿಗೆ ಒಂದು ಕಾರಣ ಕೋರಿದ ನೋಟೀಸ್ ದಿಃ 21.10.2017 ನ್ನು ತೋರಿಸಲಾಗಿ ಅದು ನಿಮಗೆ ನಿಮ್ಮ ಕಚೇರಿಯಿಂದ ನೀಡಿರುವ ನೋಟೀಸ್ ಎಂದು ಸೂಚಿಸಿದ್ದು ಸಾಕ್ಷಿ ಅದನ್ನು ನೋಡಿ ಅದನ್ನು ಅಲ್ಲಗಳೆದಿರುತ್ತಾರೆ.

ನನ್ನ ವಿರುದ್ಧ ಡಿ.ಸಿ ರವರು ಕಾರಣ ಕೋರಿ ನೋಟೀಸ್ ಜಾರಿ ಮಾಡಿರುತ್ತಾರೆಂದು ಸೂಚಿಸಿದರೆ

ಸರಿಯಲ್ಲ. ಅದರಂತೆ ತಹಶೀಲ್ದಾರ್ ರವರು ಡಿ.ಸಿ ರವರಿಗೆ ನನ್ನ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ಕಾಗದ ಬರೆದಿರುತ್ತಾರೆಂದರೆ ಸರಿಯಲ್ಲ.

ದಿಃ 18.04.1983 ರಲ್ಲಿ ನಿಮ್ಮ ತಂದೆ ಮತ್ತು ಅವರ ಸಹೋದರರು ನಡುವೆ ಜುಬಾನೆ ಹಿಸ್ಸೆ ಆಗಿದೆ ಎಂದು ಅದರ ಬಗ್ಗೆ ಒಂದು ದಾಖಲೆಯನ್ನು ಸಾಕ್ಷಿಗೆ ತೋರಿಸಲಾಯಿತು. ಅದನ್ನು ಸಾಕ್ಷಿ ಅಲ್ಲಗಳೆದಿರುತ್ತಾರೆ. ನನ್ನ ತಂದೆ ಮಲ್ಲಪ್ಪ ರವರಿಗೆ ಸರ್ವೆ ನಂ 112 ರಲ್ಲಿ ಬಂದ ಹಿಸ್ಸೆಯನ್ನು ವಾದಿಗೆ 4000 ರೂಾಗಳಿಗೆ ಬಿಟ್ಟುಕೊಡಲಾಗಿದೆ ಎಂದು ಸೂಚಿಸಿದರೆ ಸರಿಯಲ್ಲ. ಸಾಕ್ಷಿ ಸ್ವತಃ ಜುಬಾನೆ ಹಿಸ್ಸೆ ಯಾಗಿರುವುದಿಲ್ಲ ಎಂದರು . ಸದರಿ ಜುಬಾನೆ ಹಿಸ್ಸೆಗೆ ನನ್ನ ತಂದೆಯವರು ಸಹಿ ಮಾಡಿರುತ್ತಾರೆಂದು ಸೂಚಿಸಿದರೆ ಸರಿಯಲ್ಲ. ಸದರಿ ದಾಖಲೆಗೆ ವಾದಿ ಮತ್ತು ಅವರ ಸಹೋದರರು ಸಹಿ ಮಾಡಿರುತ್ತಾರೆ, ಅದಕ್ಕೆ ಸಾಕ್ಷಿಗಳಾಗಿ ಶೇಖರಪ್ಪ , ಬಸಪ್ಪ , ನಂದಯ್ಯ ಸ್ವಾಮಿ , ನಾಗಪ್ಪ ರವರುಗಳು ಸಹಿ ಮಾಡಿರುತ್ತಾರೆಂದರೆ ಸರಿಯಲ್ಲ.

ನನ್ನ ತಂದೆಯವರು ವಾದಿಯಿಂದ 4000 ರೂಾಗಳನ್ನು ಪಡೆದಿರುವುದಾಗಿ ತಮ್ಮ ಹಸ್ತಾಕ್ಷರದಲ್ಲಿ ಬರೆದುಕೊಟ್ಟಿರುತ್ತಾರೆಂದರೆ ಸರಿಯಲ್ಲ. ನನ್ನ ತಂದೆಯವರು ಸಹಿ ಮಾಡಿರುತ್ತಾರೆಂದರೆ ಸರಿಯಲ್ಲ. ಜುಬಾನೆ ಹಿಸ್ಸೆ ಮೂಲಕ ನನ್ನ ತಂದೆಯವರ ಪಾಲಿಗೆ ದಾವ ಆಸ್ತಿಯನ್ನುಹೊರತುಪಡಿಸಿ ಬೇರೆ ಆಸ್ತಿಗಳು ಬಂದಿರುತ್ತದೆ ಎಂದು ಸೂಚಿಸಿದರೆ ಸರಿಯಲ್ಲ. ಸಾಕ್ಷಿ ಸ್ವತಃ ನಮ್ಮ ಕುಟುಂಬದಲ್ಲಿ ವಿಭಾಗ ಆಗಿರುವುದಿಲ್ಲ ಎಂದರು . ಹೊಸಕೊಪ್ಪ ಗ್ರಾಮದ ಸರ್ವೆ ನಂ 1 ರ ಪೈಕಿ 24 ಗುಂಟೆ ಜಮೀನು , ಗುಡ್ಡೇಹಳ್ಳಿ ಗ್ರಾಮದ ಸರ್ವೆ ನಂ 85 ರಲ್ಲಿ 33 ಗುಂಟೆ ಜಮೀನು ಮತ್ತು ವಾಸದ ಮನೆ ಜುಬಾನೆ ಹಿಸ್ಸೆ ಮೂಲಕ ನಮ್ಮ ತಂದೆಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ಜುಬಾನೆ ಹಿಸ್ಸೆ ಯು ನಾನು ಹುಟ್ಟುವ ಪೂರ್ವದಲ್ಲಿ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ವಿಚಾರವು ನನ್ನ ತಾಯಿಗೆ ಗೊತ್ತಿದ್ದು ಸದರಿ ವಿಚಾರವು ನ್ಯಾಯಾಲಯದಲ್ಲಿ ಹೇಳಬೇಕಾಗುತ್ತದೆ ಎಂದು ಅವರ ವಿಚಾರಣೆಯನ್ನು ವಜಾಗೊಳಿಸಿಕೊಂಡು ನಾನು ಸಾಕ್ಷ್ಯನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಸರ್ವೆ ನಂ 112 ರಲ್ಲಿ ಒಟ್ಟು 0.39 ಗುಂಟೆ ವಿಸ್ತೀರ್ಣ ಇರುತ್ತದೆ. ಅದರಲ್ಲಿ ನಾವು ಒಟ್ಟಿಗೆ ಇರುತ್ತೇವೆ ನಮ್ಮಲ್ಲಿ ವಿಭಾಗ ಆಗಿರುವುದಿಲ್ಲ. ಸರ್ವೆ ನಂ 112 ರಲ್ಲಿ ಮೂಲತಃ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ. 1975 ರ ಪೂರ್ವದಲ್ಲಿ ದಾವ ಆಸ್ತಿಯ ಪಟೇಲ್ ಉಂಬಳಿ ಜಮೀನು ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀಜು ಎಸಿ ಆದೇಶದ ಮೇರೆಗೆ ರುದ್ರಪ್ಪ ಬಿನ್ ವೀರಭದ್ರಪ್ಪ ರವರ ಹಿರಿಯ ಮಗ ಹನುಮಂತಪ್ಪ ರವರ ಹೆಸರಿಗೆ ಮರುಮಂಜೂರಾತಿಯಾಗಿರುತ್ತದೆ ಎಂದು ಸೂಚಿಸಿದರೆ ಸರಿ.

ಸದರಿ ಜಮೀನನ್ನು 1946 ರ ಜುಬಾನೆ ಹಿಸ್ಸೆಯಂತೆ ಹನುಮಂತಪ್ಪ ಬಿನ್ ರುದ್ರಪ್ಪ , ವೀರಪ್ಪ ಬಿನ್ ರುದ್ರಪ್ಪ, ಶಿವಪ್ಪ ಬಿನ್ ರುದ್ರಪ್ಪ ರವರಿಗೆ ತಲಾ 13 ಗುಂಟೆಯಂತೆ ಜುಬಾನೆ ಹಿಸ್ಸೆ ಆಗಿರುತ್ತದೆ

ಎಂದು ಸೂಚಿಸಿದರೆ ಸರಿಯಲ್ಲ. ಅದರಂತೆ ಎಲ್ಲರೂ 13 ಗುಂಟೆಯಂತೆ ಸ್ವಾಧೀನ ಹೊಂದಿರುತ್ತಾರೆ ಎಂದು ಸೂಚಿಸಿದರೆ ಸರಿಯಲ್ಲ. ದಿಃ 21.11.1985 ರಲ್ಲಿ 18.04.1983 ರ ಜುಬಾನೆ ಹಿಸ್ಸೆಯಂತೆ ಈಶ್ವರಪ್ಪ , ವೀರಪ್ಪ , ಶಿವಪ್ಪ ರವರುಗಳು ದಾವಾ ಆಸ್ತಿಯಲ್ಲಿ 26 ಗುಂಟೆ ಜಮೀನಿನ ಜಂಟಿ ಅನುಭವದಲ್ಲಿರುತ್ತಾರೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು , ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಸಿಸಿ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ಹೊನ್ನಾಳಿ.